# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 747 |
| ಸದಸ್ಯರ ಹೆಸರು | : | ಶ್ರೀ ತಿಪ್ಪಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 23-07-2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿಯಲ್ಲಿ ನಿರಂತರ ನೀರು ಸರಬರಾಜು ಯೋಜನೆ ಕಾರ್ಯ ಯಾವ ದಿನಾಂಕದಿಂದ ಆರಂಭವಾಗಿದೆ; ಈ ಯೋಜನೆಯ ಒಟ್ಟು ವೆಚ್ಚ ಎಷ್ಟು? | ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (KUWSMP) ಯಡಿ ಕಲಬುರಗಿ ನಗರದ ನಿರಂತರ ನೀರು ಸರಬರಾಜು ಕಾಮಗಾರಿಯ ಗುತ್ತಿಗೆಯನ್ನು ದಿನಾಂಕ:10/06/2020 ರಂದು ಪ್ರಾರಂಭಿಸಲಾಗಿದೆ.<br><br>ಈ ಯೋಜನೆಯ ನಿರ್ಮಾಣ ಮೊತ್ತ ರೂ.604.95 ಕೋಟಿ ಮತ್ತು ಕಾರ್ಯಚರಣೆ & ನಿರ್ವಹಣೆ ಮೊತ್ತ ರೂ.232.48 ಕೋಟಿ, ಒಟ್ಟು ಗುತ್ತಿಗೆ ಮೊತ್ತ ರೂ.837.43 ಕೋಟಿಗಳಿರುತ್ತದೆ.<br><br>ಇದುವರೆಗೆ ನಿರ್ಮಾಣ ಕಾಮಗಾರಿಗೆ ರೂ.130.44 ಕೋಟಿ ಹಾಗೂ ಕಾರ್ಯಚರಣೆ ಮತ್ತು ನಿರ್ವಹಣೆಗಾಗಿ ರೂ.50.64 ಕೋಟಿ ವೆಚ್ಚ ಮಾಡಲಾಗಿದೆ. ಒಟ್ಟು ರೂ.181.08 ಕೋಟಿ ವೆಚ್ಚ ಮಾಡಲಾಗಿದೆ. |
| (ಆ) | ಈ ಯೋಜನೆಯ ಗುತ್ತಿಗೆಯನ್ನು ಯಾವ ಯಾವ ಕಂಪನಿಗೆ ಎಷ್ಟು ಮೊತ್ತಕ್ಕೆ ನೀಡಲಾಗಿದೆ; ನಿಗಧಿಪಡಿಸಿದ ಅವಧಿಯಲ್ಲಿ ಈ ಕಾರ್ಯ ಮುಗಿಯದಿರಲು ಕಾರಣವೇನು; ಇದಕ್ಕೆ ಹೊಣೆ ಯಾರು; ಈಗ ಒಟ್ಟು ಎಷ್ಟು ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲಾಗಿದೆ; ಕಳಪೆ ಮಟ್ಟದ ಪೈಪುಗಳ ಬದಲಿಗೆ ಗುಣಮಟ್ಟದ ಪೈಪ್ ಅಳವಡಿಸಲಾಗಿದೆಯೇ; | ಯೋಜನೆಯ ಗುತ್ತಿಗೆಯನ್ನು ಮೆ\|\| ಎಲ್ & ಟಿ ಕಂಪನಿ, ಚೆನ್ನೈ ರವರಿಗೆ ಗುತ್ತಿಗೆ ನೀಡಲಾಗಿದೆ.<br><br>ನಿರ್ಮಾಣ ಕಾಮಗಾರಿಗೆ ರೂ.604.95 ಕೋಟಿ ಮತ್ತು ಕಾರ್ಯಚರಣೆ & ನಿರ್ವಹಣೆಗಾಗಿ ರೂ.232.48 ಕೋಟಿ ಒಟ್ಟು ಗುತ್ತಿಗೆ ಮೊತ್ತ ರೂ.837.43 ಕೋಟಿಗಳಿರುತ್ತದೆ.<br><br>ಕರಾರಿನಂತೆ 6 ತಿಂಗಳು ವಿನ್ಯಾಸ ತಯಾರು ಮಾಡುವುದು, 4 ½ ವರ್ಷ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸುವುದು, 7 ವರ್ಷ ಸುಸ್ಥಿರ ಕಾರ್ಯಾಚರಣೆ & ನಿರ್ವಹಣೆಯನ್ನು ನಿರ್ವಹಿಸುವುದು.<br><br>**ಈ ಕೆಳಕಂಡ ಕಾರಣಗಳಿಂದ ಕಾಮಗಾರಿ ವಿಳಂಭವಾಗಿರುತ್ತದೆ.**<br>• ಕೋವಿಡ್ 19 ಸಾಂಕ್ರಾಮಿಕ ಪಿಡುಗಿನಿಂದ ಪ್ರಗತಿಯಲ್ಲಿ ಕುಂಠಿತವಾಗಿದೆ.<br>• ರೈಲ್ವೆ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ನೀರಾವರಿ ಇಲಾಖೆಗಳಿಂದ ನಿರಾಪೇಕ್ಷಣ ಪಡೆಯುವಲ್ಲಿ.<br>• ಗುತ್ತಿಗೆದಾರರ ವಿಳಂಬ. |

| | | |
|---|---|---|
| | | • ಗುತ್ತಿಗೆದಾರರ ವಿಳಂಬಕ್ಕೆ ಕರಾರಿನ ನಿಯಮಾನುಸಾರ ದಂಡ ವಿಧಿಸಲಾಗಿದೆ.<br>• ಗೃಹ ಸಂಪರ್ಕಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಇದುವರೆಗೆ 1900 ಮನೆಗಳಿಗೆ ಸಂಪರ್ಕ ನೀಡಲಾಗಿದೆ.<br>• ಕರಾರಿನ ಮಾನದಂಡದಂತೆ ವಿತರಣಾ ಜಾಲದ ಪೈಪುಗಳು ತೃಪ್ತಿಯಿಲ್ಲದ ಕಾರಣ ಕೊಳವೆಗಳನ್ನು ತಿರಸ್ಕರಿಸಲಾಗಿದೆ. ಗುಣಮಟ್ಟದ ಪೈಪುಗಳನ್ನು ಮಾತ್ರ ಅಳವಡಿಸಲಾಗುತ್ತಿದೆ. |
| (ಇ) | ಈ ಕಾರ್ಯ ನಿರ್ವಹಿಸುತ್ತಿರುವ ಎಲ್ & ಟಿ ಕಂಪನಿಗೆ ಇದುವರೆವಿಗೆ ಎಷ್ಟು ದಂಡ ವಿಧಿಸಲಾಗಿದೆ; ಸಾರ್ವಜನಿಕರಿಗೆ ಅನುಕೂಲವಾಗುವ ಅಭಿವೃದ್ಧಿಯ ಇಂತಹ ಕಾರ್ಯಗಳ ವಿಳಂಬಕ್ಕೆ ಕಾರಣರಾಗಿರುವವರನ್ನು ಕಪ್ಪು ಪಟ್ಟಿಗೆ ಸೇರಿಸುವ ಬಗ್ಗೆ ಯೋಚಿಸಲಾಗುವುದೇ? | • ಯೋಜನೆಯ ವಿಳಂಬಕ್ಕೆ ಕಾರಣರಾದ ಮೆ\|\| ಎಲ್ & ಟಿ ಕಂಪನಿ ರವರಿಂದ ರೂ.17.32 ಕೋಟಿ ದಂಡ ವಸೂಲಿ ಮಾಡಲಾಗಿದೆ.<br>• ಕರಾರಿನ ನಿಯಮದಂತೆ ನಿರ್ಮಾಣ ಕಾಮಗಾರಿಯನ್ನು ದಿನಾಂಕ:09/06/2025 ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ.<br>• ಗುತ್ತಿಗೆದಾರರಿಗೆ ಕರಾರಿನ ನಿಯಮದಂತೆ ನೋಟೀಸುಗಳನ್ನು ಜಾರಿಗೊಳಿಸಲಾಗಿದೆ. |

ಕಡತ ಸಂಖ್ಯೆ:ನಅಇ 111 ಪಿಆರ್‌ಜೆ 2024

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು